experience. Will the Hon'ble Minister kindly assure to this House?

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಆ್ಯಂಟಿ ಡಿಪೆಕ್ಷನ್‌ಗೆ ಅಮೆಂಡ್‌ಮೆಂಟ್‌ನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿ.

ಅಧ್ಯಕ್ಷರು: ಮಾನ್ಯ ಫೋರ್ಡ್‌ಡೆಯವರೆ, ತಾವೇನಾದರೂ ಇದಕ್ಕೆ ಸಂಬಂಧಪಟ್ಟ ಹಾಗೆ ಉತ್ತರವನ್ನು ಹೇಳುತ್ತೀರಾ?

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಆ್ಯಂಟಿ ಡಿಪೆಕ್ಷನ್ ಆ್ಯಕ್ಟ್‌ಗೆ ತಿದ್ದುಪಡಿಯನ್ನು ತಂದು ಈ ಸಂಸ್ಥೆಗಳನ್ನು ಸ್ಟ್ರಾಂಗ್ ಮಾಡಿ.

ಶ್ರೀ ಎ.ಎಸ್.ಗುರುಸ್ವಾಮಿ: ಅಷ್ಟೇ ಅಲ್ಲ ಸಾರ್, ವ್ಯವಸ್ಥೆ ಬಗ್ಗೆ ಪರಿಶೀಲನೆಯಾಗಬೇಕು.

ಅಧ್ಯಕ್ಷರು: ಮಾನ್ಯ ಸಚಿವರು ಎಕ್ಸಾಮಿನ್ ಮಾಡುತ್ತೇನೆಂದು ಹೇಳಿದ್ದೀರಲ್ಲಾ.

ಶ್ರೀ ಎ.ಎಸ್.ಗುರುಸ್ವಾಮಿ: ಈ ವ್ಯವಸ್ಥೆಯ ಬಗ್ಗೆ ಪುನರ್‌ಪರಿಶೀಲನೆಯಾಗಬೇಕು.

ಅಧ್ಯಕ್ಷರು: ವಿರೋಧಪಕ್ಷದ ನಾಯಕರನ್ನು ಕರೆಸಿ ಮಾತನಾಡುತ್ತೇನೆಂದು ಹೇಳಿದ್ದಾರಲ್ಲಾ.

ಶ್ರೀ ಎ.ಎಸ್.ಗುರುಸ್ವಾಮಿ: ನಮ್ಮನ್ನು ಕರೆಸಿ ಮಾತನಾಡಿದರೆ ಒಳ್ಳೆಯದಲ್ಲವೇ?

ಅಧ್ಯಕ್ಷರು: ನೀವೂ ಬನ್ನಿ.

ಶ್ರೀ ಎಸ್.ಗುರುಸ್ವಾಮಿ: ಅವರು ನಮ್ಮನ್ನು ಕರೆದರೆ ತಾನೇ ಬರುವುದಕ್ಕೆ ಸಾಧ್ಯ?

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಅವರು ಬಹಳ ಹಿಂದೆ ಇದ್ದರು ಈಗ ಅವರು ಎರಡು ರೋ ಮುಂದೆ ಬಂದಿದ್ದಾರೆ.

ಮುಚ್ಚುತ್ತಿರುವ ಶಾಲೆಗಳನ್ನು ಪುನಃ ಪ್ರಾರಂಭ ಮಾಡುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 94(1354)

ಸದಸ್ಯರ ಹೆಸರು: ಶ್ರೀ ಕರಿಯಣ್ಣ(ಹೊಳೆಹೊನ್ನೂರು)

ಉತ್ತರಿಸುವ ಸಚಿವರು: ಶ್ರೀ ಹೆಚ್.ವಿಶ್ವನಾಥ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ

ಸಚಿವರು)

ಪ್ರಶ್ನೆ

ಅ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವು ಕಡ್ಡಾಯವಾಗಿದ್ದು ಎಲ್ಲಾ ಮಕ್ಕಳಿಗೂ ವಿದ್ಯೆಯನ್ನು ನೀಡುವ ಕರ್ತವ್ಯ ಸರ್ಕಾರದ್ದಲ್ಲವೇ?

ಆ) ಇದು ಸರ್ಕಾರದ ಕಡ್ಡಾಯ ಕರ್ತವ್ಯವಾಗಿದ್ದರೂ ಸಹ ಗ್ರಾಮಾಂತರ ಪ್ರದೇಶದಲ್ಲಿ ಒಂದೊಂದು ತರಗತಿಗೆ 40 ಮಕ್ಕಳ ಸಂಖ್ಯೆ ಇರುವುದಿಲ್ಲವೆಂದು ಶಾಲೆಗಳನ್ನು ಮುಚ್ಚುತ್ತಿರುವುದರಿಂದ ಗ್ರಾಮಾಂತರ ಬಡಮಕ್ಕಳಿಗೆ ವಿದ್ಯಾಭ್ಯಾಸದಿಂದ ವಂಚನೆಯಾಗುವುದಿಲ್ಲವೇ?

ಇ) ಈ ರೀತಿ ನಿಬಂಧನೆ ಹಾಕಿಕೊಂಡು ಸರ್ಕಾರದ ಶಾಲೆಗಳನ್ನು ಮುಚ್ಚುವುದರಿಂದ ಕಡ್ಡಾಯ ಶಿಕ್ಷಣ ದೊರೆಯುವುದೇ? ದೊರೆಯದಿದ್ದಲ್ಲಿ ಮುಚ್ಚುತ್ತಿರುವ ಶಾಲೆಗಳ ಪ್ರಸ್ತಾವನೆಯನ್ನು ಕೈಬಿಟ್ಟು ಈಗಾಗಲೇ ಮುಚ್ಚಿರುವ ಶಾಲೆಗಳನ್ನು ಪುನಃ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಉತ್ತರ

ಅ) ಕಡ್ಡಾಯ ಪ್ರಾಥಮಿಕ ಶಿಕ್ಷಣದಡಿಯಲ್ಲಿ ಪ್ರಾಥಮಿಕ ಶಿಕ್ಷಣ ನೀಡುವುದು ಸರ್ಕಾರದ ಕರ್ತವ್ಯವಾಗಿದೆ. ಪ್ರೌಢಶಿಕ್ಷಣ ಕಡ್ಡಾಯ ಪ್ರಾಥಮಿಕ ಶಿಕ್ಷಣ ನಿಯಮದ ಕಕ್ಷೆಗೆ ಬರುವುದಿಲ್ಲ.

ಆ) ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳನ್ನು ಮುಚ್ಚಿರುವುದಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

11.30 ಎ.ಎಂ

ಶ್ರೀ ಕರಿಯಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಕಡ್ಡಾಯ ಪ್ರಾಥಮಿಕ ಶಿಕ್ಷಣ ಸರ್ಕಾರದ ಕರ್ತವ್ಯವಾಗಿದೆಯೆಂದು ಹೇಳಿದ್ದಾರೆ, ತುಂಬಾ ಸಂತೋಷ. ಆದರೆ ಮತ್ತೊಂದು ಕಡೆ ಏನು ಮಾಡುತ್ತಿದ್ದಾರೆಂದರೆ 1ರಿಂದ 5ರವರೆಗೆ ಪ್ರಾಥಮಿಕ ಶಿಕ್ಷಣವೆಂದು ಮಾಡಿದ್ದಾರೆ. ಆದರೆ ಮಕ್ಕಳು ಐದಾರು ಕಿಲೋಮೀಟರ್ ದೂರ ನಡೆದುಕೊಂಡು ಹೋಗಿ ಓದುವ ವ್ಯವಸ್ಥೆಯಾಗುತ್ತದೆ. ಪ್ರಾಥಮಿಕಶಾಲೆಯಲ್ಲಿ 80 ಮಕ್ಕಳು ಇದ್ದರೂ ಇಬ್ಬರು ಉಪಾಧ್ಯಾಯರು ನೋಡಿಕೊಳ್ಳುತ್ತಾರೆಂದು ಹೇಳುತ್ತಾರೆ.

ಇಬ್ಬರು ಉಪಾಧ್ಯಾಯರು ಐದು ತರಗತಿಗಳನ್ನು ಯಾವರೀತಿ ನಡೆಸಬೇಕು? ಆ ರೀತಿ ಮಾಡಲಿಕ್ಕೆ ಆಗುತ್ತದೆಯೇ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು. ಇಬ್ಬರು ಉಪಾಧ್ಯಾಯರೆಂದು ಮಾಡುವುದರಿಂದ ಎರಡು ತರಗತಿ ಬಿಟ್ಟು ಉಳಿದ ಮೂರು ತರಗತಿ ಮಕ್ಕಳನ್ನು ಮನೆಗೆ ಕಳುಹಿಸಬೇಕಾಗುತ್ತದೆ. ಇಲ್ಲದಿದ್ದರೆ ಮೂರು ತರಗತಿಗಳನ್ನು ಯಾವಾಗ ತೆಗೆದುಕೊಳ್ಳುತ್ತಾರೆ ಏನು ವ್ಯವಸ್ಥೆ ಮಾಡಿದ್ದೀರಿ ಅದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಈಗ ಹಿರಿಯ ಪ್ರಾಥಮಿಕ ಶಾಲೆ 1ನೇ ತರಗತಿಯಿಂದ ೪ನೇ ತರಗತಿಯವರೆಗೆ ಇದೆ. ಅದನ್ನು 1ನೇ ತರಗತಿಯಿಂದ 5ನೇ ತರಗತಿಯವರೆಗೆ ಮಾಡಿದ್ದೇವೆ. 80ಜನ ಮತ್ತು ಹೆಚ್ಚು ಮಕ್ಕಳು ಇದ್ದರೆ ಅಂಥ ಕಡೆ ಇಬ್ಬರು ಶಿಕ್ಷಕರು ಇರುವುದಿಲ್ಲ. 4 ಜನ ಶಿಕ್ಷಕರು ಇರುತ್ತಾರೆ. ಇಬ್ಬರು ಶಿಕ್ಷಕರು ಎಲ್ಲಿದ್ದಾರೆ ಹೇಳಿ. ಅಲ್ಲಿಗೆ ಶಿಕ್ಷಕರನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. 15 ಸಾವಿರ ಶಿಕ್ಷಕರ ನೇಮಕಾತಿಯಾಗಿದೆ. ಕೆಎಟಿನಲ್ಲಿ ಸಣ್ಣ ಸ್ಟೇ ಇರುವುದರಿಂದ ಸ್ವಲ್ಪ ತಡವಾಗಿದೆ. ತಮಗೆ ಎಲ್ಲೆಲ್ಲಿಗೆ ಶಿಕ್ಷಕರು ಬೇಕೋ ಅಲ್ಲಿಗೆ ಕೊಡುತ್ತೇವೆ.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ನಗರ ಪ್ರದೇಶಗಳಲ್ಲಿರತಕ್ಕ ಶಾಲೆಗಳು ಒಂದು ವಿಶೇಷವಾದ ಸಂಕಷ್ಟವನ್ನು ಅನುಭವಿಸುತ್ತಿವೆ. ಒಂದು ಕಡೆ ಇಂಗ್ಲೀಷ್ ಮಾಧ್ಯಮಗಳ ಪೈಪೋಟಿಯ ಹಾವಳಿ, ಇನ್ನೊಂದು ಕಡೆ ಖಾಸಗಿ ಶಾಲೆಗಳ ಪೈಪೋಟಿ. ಇವುಗಳ ಮಧ್ಯದಲ್ಲಿ ಸರ್ಕಾರಿ ಶಾಲೆಗಳು ಉಳಿಯಬೇಕಾಗಿದೆ. ಇವತ್ತು ಏನಾಗಿದೆ ಅಂದರೆ ಮಾನ್ಯ ಸಚಿವರು ಕೊಟ್ಟಿರುವ ಸೂಚನೆಯ ಆಧಾರದ ಮೇಲೆ ೬ನೇ ಮತ್ತು 7ನೇ ತರಗತಿಯ ಮಕ್ಕಳು 30ಕ್ಕಿಂತ ಕಡಿಮೆಯಿರತಕ್ಕ ಶಾಲೆಗಳನ್ನು ವಜಾ ಮಾಡಿ ಆ ಮಕ್ಕಳನ್ನು ಬೇರೆ ಬೇರೆ ಶಾಲೆಗೆ ಮರ್ಜ್ ಮಾಡುವಂತಹ ಕಾನೂನನ್ನು ತರುತ್ತಿದ್ದೀರಿ. ದಯವಿಟ್ಟು ಅದನ್ನು ನಗರಪ್ರದೇಶದ ಮಟ್ಟದಲ್ಲಿ ಹಿಂತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಗರಪ್ರದೇಶಗಳಲ್ಲಿನ ಶಾಲೆಗಳು ಉಳಿಯುವುದಿಲ್ಲ. ಅಂತಹ ದುಸ್ಥಿತಿಯಿರುವುದರಿಂದ ಅದನ್ನು ಪುನರ್ ಪರಿಶೀಲನೆ ಮಾಡಬೇಕು. ಮಹಾನಗರ ಪಾಲಿಕೆಗಳು ಮತ್ತು ನಗರ ಪ್ರದೇಶಗಳಲ್ಲಿರತಕ್ಕ ಶಾಲೆಗಳಿಗೆ ವಿಶೇಷವಾದ ಅನುಮತಿಯನ್ನು ಕೊಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ವಿಶ್ವನಾಥ್: ಹಿರಿಯ ಪ್ರಾಥಮಿಕ ಶಾಲೆಗಳು ಇದ್ದರೆ ಅದೇ ಬೀದಿಯಲ್ಲಿ ಮತ್ತು ಪಕ್ಕ ಪಕ್ಕದ ಬೀದಿಯಲ್ಲಿ 20 ಮಕ್ಕಳು ಒಂದು ಶಾಲೆಯಲ್ಲಿದ್ದು ಮತ್ತೊಂದು ಶಾಲೆಯಲ್ಲಿ 30 ಮಕ್ಕಳಿದ್ದರೆ ಆ ಎರಡೂ ಶಾಲೆಗಳನ್ನು ಒಂದುಗೂಡಿಸಿ ಸಂಯೋಜನೆ ಮಾಡಿ ಹೆಚ್ಚು ಶಕ್ತಿಯುತವಾಗಿ ಆಗುವಂತೆ ಮಾಡುತ್ತಿದ್ದೇವೆ. ಯಾವ ಶಾಲೆಗೂ ಬಾಗಿಲು ಹಾಕುತ್ತಿಲ್ಲ. ಏಕೆಂದರೆ ಇನ್‌ಟೇಕ್ ಕಡಿಮೆಯಿದೆ. ಅದರ ಜೊತೆಗೆ ಜಿಲ್ಲಾ ಪಂಚಾಯಿತಿ ಸ್ಥಾಪನೆಯಾದ ನಂತರ ನಮ್ಮ ನಗರಪ್ರದೇಶಗಳ ಸರ್ಕಾರಿ ಶಾಲೆಗಳು ಅಲ್ಲಿ

ಜನಪ್ರತಿನಿಧಿಗಳು ಇಲ್ಲದಿರುವುದರಿಂದ ಅವುಗಳನ್ನು ನೋಡುವಂತಹ ಪರಿಸ್ಥಿತಿ ಕಡಿಮೆಯಿರುವುದರಿಂದ ನಾವು ಮುಂದಿನ ಶೈಕ್ಷಣಿಕ ವರ್ಷದಿಂದ ನಾವು ಈಗಾಗಲೇ ನಗರಾಭಿವೃದ್ಧಿ ಸಚಿವರು, ಪೌರಾಡಳಿತ ಸಚಿವರು ಗ್ರಾಮೀಣಾಭಿವೃದ್ಧಿ ಸಚಿವರ ಜೊತೆ ನಾವು ಸಂಪರ್ಕ ಮಾಡಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿ ಜಿಲ್ಲಾಪಂಚಾಯಿತಿ, ನಗರಸಭೆ, ಪುರಸಭೆ ಶಾಲೆಗಳನ್ನು ಹಸ್ತಾಂತರ ಮಾಡತಕ್ಕ ಕ್ರಿಯೆ ಪ್ರಾರಂಭ ಮಾಡಿದ್ದಾರೆ.

ಅಧ್ಯಕ್ಷರು: ಮಾನ್ಯ ಕರಿಯಣ್ಣನರೇ, ಕೊನೆಯ ಪ್ರಶ್ನೆ ಕೇಳಿ.

ಶ್ರೀ ಕರಿಯಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಮೂರು ನಾಲ್ಕು ಶಿಕ್ಷಕರನ್ನು ಕೊಡುತ್ತೇವೆಂದು ಹೇಳಿದ್ದಾರೆ. ಹೊಸದಾಗಿ ರಿಕ್ರೂಟ್‌ಮೆಂಟ್ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಒಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ. 40 ಜನ ಮಕ್ಕಳು ಇದ್ದರೆ ಒಬ್ಬರು ಶಿಕ್ಷಕರನ್ನು 80 ಜನ ಮಕ್ಕಳು ಇದ್ದರೆ ಇಬ್ಬರು ಶಿಕ್ಷಕರನ್ನು ಕೊಡಬೇಕೆಂದು ಸುತ್ತೋಲೆ ಕೊಟ್ಟಿರುವುದರಿಂದ ಬಿಇಒಗಳು ಇಬ್ಬರು ಶಿಕ್ಷಕರನ್ನು ನೇಮಕ ಮಾಡುತ್ತಿದ್ದಾರೆ. ಆ ಸುತ್ತೋಲೆಯನ್ನು ನೀವು ವಾಪಸ್ಸು ತೆಗೆದುಕೊಳ್ಳದಿದ್ದರೆ ಆ ಸುತ್ತೋಲೆಗನುಗುಣವಾಗಿ ನಿಮ್ಮ ಅಧಿಕಾರಿಗಳು ಕೆಲಸ ಮಾಡುತ್ತಾರೆ. ಹಾಗೆ ಮಾಡದಿದ್ದರೆ ಆ ಸುತ್ತೋಲೆಗನುಗುಣವಾಗಿ ನಿಮ್ಮ ಅಧಿಕಾರಿಗಳು ಕೆಲಸ ಮಾಡುತ್ತಾರೆ. ಹಾಗೆ ಮಾಡದಿದ್ದರೆ ಹೇಳತಕ್ಕದ್ದು ಒಂದು ವಿಚಾರ ಮಾಡತಕ್ಕದ್ದು ಮತ್ತೊಂದು ವಿಚಾರವಾಗುತ್ತದೆ. ದಯಮಾಡಿ ಆ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಂಡು 1 ರಿಂದ 5ನೇ ತರಗತಿಯವರೆಗೆ 5ಜನ ಶಿಕ್ಷಕರನ್ನು ಅದಕ್ಕೆ ಎಷ್ಟು ಬೇಕಾಗುತ್ತದೆ ಅದಕ್ಕನುಗುಣವಾಗಿ ಶಿಕ್ಷಕರನ್ನು ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡ ಅವರೊಂದು ಪ್ರಶ್ನೆ ಕೇಳುತ್ತಾರೆ. ಒಂದೇ ಸಾರಿ ಉತ್ತರ ಕೊಡಿ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಮೂರು ಪ್ರಾಥಮಿಕ ಶಾಲೆಗಳನ್ನು ಕ್ಲೋಸ್ ಮಾಡಿದ್ದಾರೆ. ಕೇಳಿದರೆ 25 ಮಕ್ಕಳಿಗಿಂತ ಒಳಗಡೆ ಇರುವುದರಿಂದ ಕ್ಲೋಸ್ ಮಾಡಿದ್ದೇವೆಂದು ಹೇಳುತ್ತಾರೆ. ಐದು ವರ್ಷದ ಮಕ್ಕಳು ಒಂದು ಒಂದೂವರೆ ಮೈಲಿ ದೂರ ಹೋಗಿ ಬರಬೇಕಾದರೆ ಮೂರು ಮೈಲಿಯಾಗುತ್ತದೆ. ಅವರು ಹೋಗಿ ಬರುವುದಕ್ಕೆ ಸಾಧ್ಯವಿದೆಯೆ? ಇಂತಹ ಪರಿಸ್ಥಿತಿಯಲ್ಲಿ ಒಂದು ಕಡೆ ಸರ್ಕಾರ ಶಿಕ್ಷಣ ಕಡ್ಡಾಯವೆಂದು ಹೇಳುತ್ತೀರಿ. ಪ್ರೌಢ ಶಿಕ್ಷಣದವರೆಗೆ ಎಲ್ಲಾ ಹಂತದಲ್ಲೂ ಶಿಕ್ಷಣವನ್ನು ಕಡ್ಡಾಯ ಮಾಡುತ್ತೇವೆಂದು ಸರ್ಕಾರ ಒಂದು ಕಡೆ ಹೇಳುತ್ತದೆ. dropouts ಕಡೆಗೆ ಗಮನಹರಿಸುವುದಿಲ್ಲ. ಪತ್ರಿಕೆಗಳಲ್ಲಿ 25 ಮಕ್ಕಳು ಇದ್ದರೂ ಶಾಲೆ ತೆಗೆಯುತ್ತೇವೆಂದು ಕೊನೆಗೆ 15 ಜನ ಮಕ್ಕಳು ಇದ್ದರೆ

ಒಬ್ಬರು ಉಪಾಧ್ಯಾಯರನ್ನು ಕೊಡುತ್ತೇವೆನ್ನುವಾಗ 5 ವರ್ಷದ ಮಕ್ಕಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ನಡೆದುಕೊಂಡು ಹೋಗುವುದಕ್ಕೆ ಸಾಧ್ಯವಾಗದಿರುವ ಕಡೆಗೆ ಸ್ವಲ್ಪ ಗಮನ ಹರಿಸಬೇಕು. ಅಂತಹ ಶಾಲೆಗಳನ್ನು ಪುನರ್ ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಹಿಂದೆ ಏನು ವ್ಯವಸ್ಥೆಯಿತ್ತು ಅದು ಚೆನ್ನಾಗಿತ್ತು. ಈ ಸರ್ಕಾರದಲ್ಲಿ ಶಿಕ್ಷಣ ಸಚಿವರು ತೆಗೆದುಕೊಂಡಂತಹ ಕಾರ್ಯಕ್ರಮವನ್ನು ನೋಡಿದರೆ ಬರೀ ಗೊಂದಲ. 5ನೇ ತರಗತಿಯನ್ನು ಪ್ರಾಥಮಿಕ ಶಾಲೆಗೆ ಸೇರಿಸುವುದು. 8ನೇ ತರಗತಿಯನ್ನು ಹಿರಿಯ ಪ್ರಾಥಮಿಕ ಶಾಲೆಗೆ ಸೇರಿಸುವುದು. ಅಲ್ಲಿ ಉಪಾಧ್ಯಾಯರನ್ನು ಹೇಗೆ ನೇಮಕ ಮಾಡುತ್ತೀರಿ? ಈಗಾಗಲೇ ನಮ್ಮ ಕ್ಷೇತ್ರದಲ್ಲಿ 40ರಿಂದ 50 ಶಾಲೆಗಳನ್ನು ಮುಚ್ಚಿದ್ದಾರೆ. 50 ಜನಸಂಖ್ಯೆ ಇದ್ದರೆ ಅಲ್ಲೊಂದು ಪ್ರಾಥಮಿಕ ಶಾಲೆಯನ್ನು ಮಾಡಬೇಕೆಂದು ಇರುವಾಗ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿದ್ದಾರೆ. ಹೀಗೆ ಶಾಲೆಗಳನ್ನು ಮುಚ್ಚುವುದರಿಂದ ಅದನ್ನು ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲ. ಪ್ರೌಢ ಶಾಲೆಗಳಲ್ಲಿ ಪಾಠವನ್ನು ಮಾಡಲಿಕ್ಕೆ ಶಿಕ್ಷಕರನ್ನು ಹೇಗೆ ನೇಮಕ ಮಾಡುತ್ತೀರಿ? ಹಿರಿಯ ಪ್ರಾಥಮಿಕ ಶಾಲೆಗಳನ್ನು ಹೆಡ್‌ಮಾಸ್ಟರ್ ನೋಡಿಕೊಳ್ಳುತ್ತಾರೆಯೆ? ಗ್ರಾಜುಯೇಟ್ ಹೆಡ್‌ಮಾಸ್ಟರ್‌ಗಳನ್ನು ನೇಮಕ ಮಾಡಿದ್ದೀರಿ, ಯಾರು ನೋಡಿಕೊಳ್ಳುತ್ತಾರೆಂದು ಮಾನ್ಯ ಸಚಿವರು ಸಭೆಗೆ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸಗೌಡರು ಮೂರು ಪ್ರಾಥಮಿಕ ಶಾಲೆಗಳನ್ನು ಮುಚ್ಚಿದ್ದಾರೆಂದು ಹೇಳಿದ್ದಾರೆ. ಪ್ರತಿಯೊಂದು ಬೂರಿನಲ್ಲಿಯೂ ಕೂಡ 1ರಿಂದ 5ನೇ ತರಗತಿಯವರೆಗೆ ಹಿರಿಯ ಪ್ರಾಥಮಿಕ ಶಾಲೆಗಳು ಕಡ್ಡಾಯವಾಗಿ ಇರಬೇಕೆಂದು ಸರ್ಕಾರದ ಆದೇಶವಿದೆ. ಆ ರೀತಿ ಯಾವುದಾದರೂ ಶಾಲೆಗಳನ್ನು ಮುಚ್ಚಿದ್ದರೆ ಶಾಲೆಗೆ ಬಾಗಿಲು ಹಾಕಿದ್ದರೆ ತಕ್ಷಣ ಆ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಶಾಲೆಯನ್ನು ಪುನರ್ ಪ್ರಾರಂಭ ಮಾಡುತ್ತೇನೆಂದು ತಿಳಿಯಬಯಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ಧರಾಮಯ್ಯನವರು ಋಣಕಾಸಿನ ಸಚಿವರಾಗಿದ್ದಾಗ ರಾಷ್ಟ್ರ ಸ್ವಾತಂತ್ರ್ಯೋತ್ಸವವನ್ನು ಆಚರಣೆ ಮಾಡುವಂತಹ ಸಂದರ್ಭದಲ್ಲಿ ಮಂಡಿಸಿರತಕ್ಕ ಬಜೆಟ್ ಭಾಷಣದಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ 10 ಮಕ್ಕಳು ಇದ್ದರೂ ಶಾಲೆಗಳನ್ನು ತೆರೆಯುತ್ತೇವೆನ್ನುವ ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದರು. ಆ ಆಜ್ಞೆಯನ್ನು ಪಾಪಸ್ಸು ತೆಗೆದುಕೊಂಡಿದ್ದೀರಾ? ಇಲ್ಲದಿದ್ದರೆ ಕೋಲಾರ ಜಿಲ್ಲೆ ಒಂದೇ ಅಲ್ಲ ಇಡೀ ರಾಜ್ಯದಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಮುಚ್ಚಿರತಕ್ಕ ಸತ್ಯಾಂಶ ಯಾವರೀತಿ ಇದೆಯೆನ್ನುವ ಅಂಕಿಅಂಶಗಳನ್ನು

ಕೊಡುತ್ತೇನೆ. ಯಾವರೀತಿಯ ಅಧಿಕಾರವನ್ನು ಅಧಿಕಾರಿಗಳಿಗೆ ಕೊಟ್ಟಿದ್ದೀರೋ ಗೊತ್ತಿಲ್ಲ. ಬಿಇಒಗಳನ್ನು ಕೇಳಿದರೆ ಅದನ್ನು ಹೇಳುತ್ತಾರೆ.

ಶ್ರೀ ಹೆಚ್.ವಿಶ್ವನಾಥ್: ಯಾವುದೇ ಆರ್ಡರ್‌ನ್ನು ವಿತ್‌ಡ್ರಾ ಮಾಡಿಲ್ಲ. ಆ ರೀತಿ ಏನಾದರೂ ಇದ್ದರೆ ತಿಳಿಸಿ. ಏನಾಗಿದೆ ಅಂದರೆ ಸುಮ್ಮನೆ ಹಿಯರ್ ಸೇಕ್‌ನಲ್ಲಿ ಬಂದು ಮಾತನಾಡಿದರೆ ಆಗುವುದಿಲ್ಲ. ಆ ಗೌರ್ನಮೆಂಟ್ ಆರ್ಡರ್ ಇದೆ. ಯಾರಾದರೂ ಬಂದು ನಮ್ಮ ಊರಿನಲ್ಲಿ 10- 15 ಜನ ಮಕ್ಕಳಿದ್ದಾರೆಂದು ಆರ್ಜಿ ಕೊಟ್ಟರೆ ಬೇಗೆಯೇ ಪ್ರಾಥಮಿಕ ಶಾಲೆಯನ್ನು ತೆರೆದು ಒಬ್ಬರು ಶಿಕ್ಷಕರನ್ನು ತಕ್ಷಣ ನೇಮಕ ಮಾಡಬೇಕೆಂದು ಆದೇಶವಿದೆ. ನೀವು ಮಾಡಿದಂತಹ ಆದೇಶವನ್ನು ನಾವು ವಾಪಸ್ಸು ಪಡೆದಿದ್ದೇವೆ. ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಕೊಡುವ ದಿಕ್ಕಿನಲ್ಲಿ ಪ್ರತಿ ಹಳ್ಳಿಯೂ ಕೂಡ ಇವತ್ತು ನಮಗೆ ವರದಿ ಇದೆ ಯಾವ ಹಳ್ಳಿಯಲ್ಲೂ ಕೂಡ ಶಾಲೆಯಿಲ್ಲ ಅನ್ನತಕ್ಕಂಥದ್ದು ಇಲ್ಲ. ತಾವು ಹೇಳಿದ್ದೀರಿ ತಕ್ಷಣ ಗಮನಿಸುತ್ತೇನೆ. ಅದನ್ನು ಪುನರ್ ಪ್ರಾರಂಭ ಮಾಡಲು ಪರಿಶೀಲನೆ ಮಾಡುತ್ತೇನೆ.

ಶ್ರೀ ಕರಿಯಣ್ಣ: ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಹೇಳಲಿಲ್ಲ. 40 ಜನ ಮಕ್ಕಳು ಇದ್ದರೆ ಅಲ್ಲಿ ಒಬ್ಬರೇ ಉಪಾಧ್ಯಾಯರು ಕೆಲಸ ಮಾಡುತ್ತಿದ್ದಾರೆ ಎಂದು ಲೆಕ್ಕಾಚಾರ ಮಾಡಿ ಶಿಕ್ಷಕರನ್ನು ನೇಮಕ ಮಾಡುತ್ತಾರೆ. ಆ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಒಬ್ಬರು ಇದ್ದರೆ ಮತ್ತೊಬ್ಬರನ್ನು, ಇಲ್ಲಿ ಏನು ಹೇಳಿದ್ದಾರೆಂದರೆ ಮುಂದೆ ಉಪಾಧ್ಯಾಯರನ್ನು ತೆಗೆದುಕೊಂಡಾಗ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಅಲ್ಲಿ ಇನ್ಸ್‌ಪೆಕ್ಷನ್ ಮಾಡಿದಾಗ ಆ ರೀತಿ ಕೊಟ್ಟಿದ್ದಾರೆ, ಇದರಿಂದ ಏನಾಗುತ್ತದೆ ಅಂದರೆ ಅಲ್ಲಿ ಗೊಂದಲ ಉಂಟಾಗಿ ಆ ಮಕ್ಕಳಿಗೆ ನಾವು ಕಡ್ಡಾಯ ಶಿಕ್ಷಣ ಕೊಟ್ಟರೂ ಸಹಿತ ಉಪಾಧ್ಯಾಯರ ಕೊರತೆಯಿಂದ ಆ ಮಕ್ಕಳು ವಿದ್ಯಾಭ್ಯಾಸವನ್ನೆ ಕಲಿಯದೆ, ಸರ್ಕಾರಿ ಶಾಲೆಯ ಮೇಲೆ ಕೆಟ್ಟ ಹೆಸರು ಬರತಕ್ಕಂಥ ಪರಿಣಾಮ ಉಂಟಾಗಿದೆ. ಆದ್ದರಿಂದ ದಯವಿಟ್ಟು ಅದನ್ನು ತೆಗೆಯುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ವಿಶ್ವನಾಥ್: ಮಾನ್ಯ ಕರಿಯಣ್ಣನವರು ಹೇಳುತ್ತಿರುವುದು ಒಂದರಿಂದ ಐದರತನಕ ಐದು ಮಂದಿ ಶಿಕ್ಷಕರನ್ನು ಕೊಡಿ ಎಂದು. ನಮ್ಮಲ್ಲಿ ಒಂದೊಂದು ಊರಿನಲ್ಲಿ ಹೇಗಿದೆ ಎಂದರೆ ಈ ಜನಸಂಖ್ಯಾ ನಿಯಂತ್ರಣ ಹೆಚ್ಚೆಚ್ಚು ಪರಿಣಾಮಕಾರಿಯಾಗಿ ಆಗುತ್ತಾ ಇರುವುದರಿಂದ ಇನ್‌ಟೇಕ್ ಕೂಡ ಕಡಿಮೆಯಾಗುತ್ತಿದೆ. ಆದ್ದರಿಂದ ಒಂದು ಊರಿನಲ್ಲಿ 1ರಿಂದ 5ರವರೆಗೆ 20 ಮಕ್ಕಳು ಮಾತ್ರ ಇರುತ್ತಾರೆ. ಅಲ್ಲಿ ಐದು ಶಿಕ್ಷಕರನ್ನು ನಾನು ಹೇಗೆ ಕೊಡಲಿ? ಆದ್ದರಿಂದ ಕೆಲವು ರಿಫಾರ್ಮ್ಸ್ ಮಾಡುವುದಕ್ಕೆ ಹೋಗುತ್ತಾ ಇರುವುದನ್ನು, ರೀಆರ್ಗನೈಸ್ ಮಾಡುವುದನ್ನು ಗೊಂದಲ ಎಂದು ಹೇಳುತ್ತೀರಾ? ಆದ್ದರಿಂದ ನಿಮ್ಮ ಮನಸ್ಸುಗಳನ್ನು ಗೊಂದಲ

ಮಾಡಿಟ್ಟುಕೊಂಡರೆ ನಾನೇನು ಮಾಡಲಿ? ಈ ರೀತಿಯಾಗಿ ಗೊಂದಲ-ಗೊಂದಲ ಎಂದು ಹೇಳಿದರೆ ನಾನೇನು ಮಾಡುವುದಕ್ಕೆ ಸಾಧ್ಯ?

ಶ್ರೀ ಕರಿಯಣ್ಣ: ಹಾಗಾದರೆ ಸಿಂಧ್ಯ ಸಾಹೇಬರು ಹೇಳಿದಹಾಗೆ ಈ ಶಾಲೆಗಳು ಮುಚ್ಚಿವೆ ಎಂದು ಆಯಿತಲ್ಲಾ? 25 ಮಕ್ಕಳು ಇದ್ದರೆ ಇಬ್ಬರು ಶಿಕ್ಷಕರನ್ನು ಹೇಗೆ ಕೊಡುವುದು ಎನ್ನುವುದಾದರೆ ಆ ಶಾಲೆಗಳನ್ನು ಮುಚ್ಚಬೇಕು ಅನ್ನುವುದು ನಿಮ್ಮ ಅರ್ಥ? ಅವರು ಐದು ಕಿಲೋಮೀಟರ್‌ನಿಂದ ಬರಬಾರದು ಅಂತಲಾ? ಇದಕ್ಕೆ ಏನಾದರೂ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕಲ್ಲವೇ?

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ಪಕ್ಕದಲ್ಲಿ ಇರತಕ್ಕಂಥ ಶಾಲೆಗಳು ಎಲ್ಲೆಲ್ಲಿ ಇವೆ ಅಲ್ಲಿ 60 ಮಕ್ಕಳು ಇದ್ದರೆ ಒಂಬತ್ತು ಜನ ಮೇಷ್ಟ್ರುಗಳು ಇದ್ದಾರೆ. ಎಷ್ಟು ಉದಾಹರಣೆಗಳು ಬೇಕು ನಿಮಗೆ? ಇನ್ನೂರು ಜನ ಮಕ್ಕಳು ಇರುವ ಕಡೆ ಮೂರು ಜನ ಮೇಷ್ಟ್ರು ಇದ್ದಾರೆ. ರಿಆರ್ಗನೈಸ್ ಮಾಡುತ್ತೇವೆಯೆಂದು ನೀವು ಹೇಳಿ ಎರಡೂವರೆ ವರ್ಷ ಆಯಿತು. ಶಾಲೆಗಳನ್ನು ಮುಚ್ಚಿದ್ದೀರಿ, ರಿಆರ್ಗನೈಸ್ ಮಾಡುತ್ತಿಲ್ಲ, ಸಂಬಳವನ್ನೂ ಕೊಡುತ್ತಿಲ್ಲ. ಅವರು ಹೇಗೆ ಶಾಲೆಗಳನ್ನು ನಡೆಸುವುದು?

ಶ್ರೀ ಹೆಚ್.ವಿಶ್ವನಾಥ್: ಸರ್ಕಾರಿ ಶಾಲೆಗಳಲ್ಲೂ ಕೂಡ ರಿ-ಡಿಪ್ಲಾಯ್‌ಮೆಂಟ್ ಮಾಡುತ್ತಿದ್ದೇವೆ. ಚುನಾಯಿತ ಪ್ರತಿನಿಧಿಗಳಿಂದ ಬಹಳಷ್ಟು ಒತ್ತಾಯಗಳು ಇವೆ. ಗ್ರಾಮ ಪಂಚಾಯಿತಿಯಿಂದ ಹಿಡಿದು ಪಾರ್ಲಿಮೆಂಟ್ ಮೆಂಬರ್ ತನಕ ಆ ಮೇಷ್ಟ್ರು ಟೌನ್‌ನಲ್ಲೇ ಇರಲಿ ಎಂದು ಹೇಳುತ್ತಾರೆ. ಬಹಳಷ್ಟು ಜನರನ್ನು ಹೊರಗೆ ಹೊರಗೆ ಹಾಕಿಬಿಟ್ಟಿದ್ದೇವೆ. ಇದು ಒಂದೇ ಸಲ ಆಗುವುದಿಲ್ಲ. 50 ವರ್ಷಗಳಿಂದ ಒಂದೇ ಸಮನೆ ನಡೆದುಕೊಂಡು ಬರುತ್ತಿರುವುದನ್ನು ಕೂಡಲೇ ಬದಲಾವಣೆ ಮಾಡಬೇಕು ಎಂದರೆ ಕಷ್ಟವಾಗುತ್ತದೆ, ನಿಜ. ನೂರಕ್ಕೆ ನೂರು ಒಂದೇ ಸಾರಿ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಈ ದಿಕ್ಕಿನಲ್ಲಿ ಒಂದು ಪ್ರಾಮಾಣಿಕ ಪ್ರಯತ್ನ ಸಾಗುತ್ತಾ ಇದೆ ಎನ್ನತಕ್ಕಂಥಾದ್ದನ್ನು ಹೇಳುತ್ತಿದ್ದೇನೆ.

ಬೈಲಹೊಂಗಲ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಗ್ರಂಥಾಲಯ ತೆರೆಯುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 95(೧೦೯೮)

ಸದಸ್ಯರ ಹೆಸರು: ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲಹೊಂಗಲ)